ಪರಿಸ್ಥಿತಿ ನೋಡಿದರೆ ಯಾವ ಸಂದರ್ಭದಲ್ಲಿ ಹೇಗೆ ಬೀಳುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಅದರ ರಿಪೇರಿಯನ್ನು ಯಾವಾಗ ಮಾಡಿಸುತ್ತೀರೆಂದು ಹೇಳಬೇಕು.

ಶ್ರೀ ಜಿ.ಎಚ್. ಅಶ್ವಥರೆಡ್ಡಿ : ನಮ್ಮ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಂತೆ ನಾವು ರಿಪೇರಿಗಾಗಿ ಸುಮಾರು 38 ಕೋಟಿ ರೂಪಾಯಿಗಳನ್ನು ಕೇಳಿದರೆ, ನಮಗೆ ಒದಗಿಸಿದ್ದುದು ಬರೀ 10 ಕೋಟಿ ರೂಪಾಯಿ ಮಾತ್ರ ಅದನ್ನೆಲ್ಲಾ ಇದೇ ಆರ್ಥಿಕ ವರ್ಷದಲ್ಲಿ ರಿಪೇರಿ ಮಾಡಬೇಕೆಂದರೆ ಸ್ವಲ್ಪ ಕಷ್ಟವಾಗುತ್ತದೆ. ಆದುದರಿಂದ ಅವೇಲಬಲ್ ಫಂಡ್ಸ್ ಮೇಲೆ ಸ್ವಲ್ಪ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಶ್ರೀ ಕೆ.ವಿ. ರವೀಂದ್ರನಾಥ ಬಾಬು, ನಿಮ್ಮ ಪ್ರಶ್ನೆಗೆ ಎರಡು ವಾರ ಟೈಮ ಕೇಳಿದ್ದಾರೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಮಾನ್ಯ ಅಧ್ಯಕ್ಷರೇ, ಕಳೆದ ಸಾರಿಯು ಸಹ ಇದೇ ರೀತಿಯಾಗಿ ಎರಡು ವಾರ ಮುಂದೆ ಹಾಕಿದ್ದಾರೆ. ಎರಡು ವಾರ ಮೂರು ವಾರ ಮುಂದೆ ಹಾಕಿದರೆ ಕಷ್ಟವಾಗುತ್ತದೆ.

ಅಧ್ಯಕ್ಷರು : ಮುಂದಿನ ವಾರ ನಿಮ್ಮ ಪ್ರಶ್ನೆಗೆ ಉತ್ತರ ಬರುತ್ತದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಅಧ್ಯಕ್ಷರೆ, ನನಗೆ ಉತ್ತರ ಬಂದಿರುವುದಿಲ್ಲ, ಗ್ರಾಮೀಣ ಅಭಿವೃದ್ಧಿಗೆ ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಿದ್ದೇನೆ.

ಅಧ್ಯಕ್ಷರು : ಹೌದು, ತಪ್ಪಾಗಿದೆ, ನೀವು ಯಾರಿಗೆ ಅಡ್ರೆಸ್ ಮಾಡಿದಿರಿ, ಈ ಪ್ರಶ್ನೆಯನ್ನು.....

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಸಚಿವರಿಗೆ.

ಅಧ್ಯಕ್ಷರು : ಏನು ದೇವರು ನೀವು ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಿಗೆ ಎಂದು ಬರೆದಿದ್ದೀರಿ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಅಧ್ಯಕ್ಷರೆ, ಒಂದು ಪಕ್ಷ ನಾನು ಗ್ರಾಮೀಣ ಅಭಿವೃದ್ಧಿ ಮಂತ್ರಿ ಎಂದು ಹಾಕಿದ್ದರೂ ಅವರಿಗೆ ಕನ್ನಡ ಓದಲಿಕ್ಕೆ ಬರುವುದಿಲ್ಲವೇ?

ಅಧ್ಯಕ್ಷರು : ನೀವು ಆ ಪ್ರದೇಶವನ್ನು ಪ್ರತಿನಿಧಿಸತಕ್ಕವರು. ನಿಮಗೆ ಗೊತ್ತಿಲ್ಲದೇ ಹೋದರೆ ಹೇಗೆ. ಅದು ಮಧ್ಯಂತರ ಮಂಡಲ ಅಂದರೆ ಹೆಚ್.ಯು.ಡಿ.ಗೆ ಬರುತ್ತದೆ. ರೆಗ್ಯುಲರ್ ಮಂಡಲ ಅಂದರೆ ಗ್ರಾಮೀಣ ಅಭಿವೃದ್ಧಿಗೆ ಬರುತ್ತದೆ ಎಂದು ಹೇಳಿ ತಮಗೆ ಗೊತ್ತಿಲ್ಲವೆ. ಆದ್ದರಿಂದ, ನಮ್ಮ ಸೆಕ್ರೆಟರಿಯೇಟ್‌ನಲ್ಲಿ ತಾವು ಯಾರಿಗೆ ಅಪೇಕ್ಷೆ ಪಡುತ್ತೀರೋ ಅವರಿಗೆ ಕಳುಹಿಸಿಕೊಡುತ್ತಾರೆ. ನಾವು ಬೇರೆ ಯಾರಿಗೂ ಕಳುಹಿಸಿಕೊಡುವುದಿಲ್ಲ ಈಗ ಅದನ್ನು ಬದಲಾವಣೆ ಮಾಡಿಕೊಳ್ಳಲಿಕ್ಕೆ ಹೇಳುತ್ತೇನೆ ಬಿಡಿ.

ರಾಜ್ಯದ ಪ್ರವಾಸೀ ಕೇಂದ್ರಗಳ ಅಭಿವೃದ್ಧಿ

2775 - ಶ್ರೀ ಪ್ರಭಾಕರ ಎಸ್.ರಾಣೆ (ಕಾರವಾರ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರವಾಸೀ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಹಾಗೂ ಪ್ರವಾಸೋದ್ಯಮ ಇಲಾಖೆಗೆ ಕಾಯಕಲ್ಪ ಮಾಡಲು 160 ಕೋಟಿ ರೂಪಾಯಿ ಯೋಜನೆ ಸಿದ್ಧಪಡಿಸಿದ್ದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ಯೋಜನೆಯಲ್ಲಿ ರಾಜ್ಯದ ಯಾವ ಯಾವ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ?

ಇ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು): ಅ) ಸರ್ಕಾರವು ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಯ ಯೋಜನೆಗೆ ಜಪಾನಿನ ಓ.ಇ.ಸಿ.ಎಫ್. ಸಂಸ್ಥೆಯಿಂದ ರೂ.110.60 ಕೋಟಿ ರೂ.ಗಳ ಆರ್ಥಿಕ ನೆರವಿಗಾಗಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಆ) ಈ ಯೋಜನೆಯಲ್ಲಿ ರಾಜ್ಯದ ಉತ್ತರ ವೃತ್ತ ಮತ್ತು ದಕ್ಷಿಣ ವೃತ್ತಗಳಲ್ಲಿ ಬರುವ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಪಟ್ಟಿಯನ್ನು ಲಗತ್ತಿಸಿದೆ.

ಇ) ಜಪಾನ್ ಸರ್ಕಾರದ ಆರ್ಥಿಕ ನೆರವಿನ ಪಟ್ಟಿಯಲ್ಲಿ ಈ ಯೋಜನೆಯನ್ನು 1991-92ನೇ ಸಾಲಿನಲ್ಲಿ ಸೇರಿಸಿರುವುದಿಲ್ಲ. ಭಾರತ ಸರ್ಕಾರದ ನಿರ್ದೇಶನದ ಪ್ರಕಾರ ಪರಿಷ್ಕರಿಸಿದ ಪ್ರಸ್ತಾವನೆಯನ್ನು 1992-93ನೇ ಸಾಲಿಗೆ ತಯಾರಿಸಲಾಗುತ್ತಿದೆ.

ಆಯ್ಕೆ ಮಾಡಿರುವ ಎರಡು ಪ್ರವಾಸಿ ವೃತ್ತಗಳಲ್ಲಿ ಬರುವ ಪ್ರವಾಸಿ ತಾಣಗಳ ಪಟ್ಟಿ

ಅ) ದಕ್ಷಿಣ ವೃತ್ತದಲ್ಲಿ ಬರುವ ಪ್ರದೇಶಗಳು

ಬೆಂಗಳೂರು, ಮೈಸೂರು, ಶ್ರವಣಬೆಳಗೊಳ, ಹಳೇಬೀಡು, ಬೇಲೂರು ಮತ್ತು ನಾಗರಹೊಳೆ.

ಆ) ಉತ್ತರ ವೃತ್ತದಲ್ಲಿ ಬರುವ ಪ್ರದೇಶಗಳು.

ಐಹೊಳೆ, ಬಾದಾಮಿ, ಬಿಜಾಪುರ, ಪಟ್ಟದಕಲ್ಲು, ಮತ್ತು ಹಂಪಿ

ಆಯ್ಕೆ ಮಾಡಿರುವ ತಾಣಗಳ ಪ್ರಾಮುಖ್ಯತೆ ಈ ಕೆಳಕಂಡಂತಿದೆ.

ಸ್ಥಳದ ಹೆಸರು	ಪ್ರಾಮುಖ್ಯತೆ
ದಕ್ಷಿಣ ವೃತ್ತ	
ಬೆಂಗಳೂರು	ಕರ್ನಾಟಕದ ರಾಜಧಾನಿ
ಬನ್ನೇರುಘಟ್ಟ	ರಾಷ್ಟ್ರೀಯ ಉದ್ಯಾನವನ
ಬೇಲೂರು	ದೇವಸ್ಥಾನಗಳು
ಭೀಮೇಶ್ವರಿ	ಮೀನು ಹಿಡಿಯುವ ತಾಣ
ಬಂಡೀಪುರ	ರಾಷ್ಟ್ರೀಯ ಉದ್ಯಾನವನ
ಬಿಳಿಗಿರಿರಂಗನ ಬೆಟ್ಟ	ವನ್ಯ ಮೃಗಧಾಮ ಮತ್ತು ದೇವಸ್ಥಾನ
ಚಿಕ್ಕಮಗಳೂರು	ಕಾಫಿ ತೋಟಗಳು, ಸಾಹಸ ಪ್ರವಾಸೋದ್ಯಮ ಚಟುವಟಿಕೆಗಳ ಕೇಂದ್ರ ಬಿಂದು
ಚಿತ್ರದುರ್ಗ	ಐತಿಹಾಸಿಕ ಸ್ಥಳ
ಗೊರೂರು ಅಣೆಕಟ್ಟು	ಜಲಕ್ರೀಡೆಗಳು

ಗುಂಡ್ಲುಪೇಟೆ	ವನ್ಯಮೃಗ ಪ್ರವಾಸೋದ್ಯಮ
ಹಿರಿಯೂರು	ಹೆದ್ದಾರಿ ಸೌಲಭ್ಯ
ಹಳೇಬೀಡು	ದೇವಸ್ಥಾನಗಳು
ಹಾಸನ	ಬೇಲೂರು, ಹಳೇಬೀಡು ಮುಂತಾದ ಸ್ಥಳಗಳಿಗೆ ಹೋಗಲು ಕೇಂದ್ರ ಸ್ಥಾನ
ದೊಡ್ಡಗದ್ದವಳ್ಳಿ ಶಾಂತಿಗ್ರಾಮ,	ಹಾಸನಕ್ಕೆ ಸಮೀಪದಲ್ಲಿರುವ ಮೊಸಳೆ ಹೊಸಹಳ್ಳಿ, ಸ್ಥಳೀಯ ಆಕರ್ಷಣಾ ಸ್ಥಳಗಳು
ಹಾರನಹಳ್ಳಿ, ಅರಸೀಕೆರೆ, ಬೆಳಗಾವಿ, ಕೋರಮಂಗಲ	
ಕೃಷ್ಣರಾಜಸಾಗರ ಅಣೆಕಟ್ಟು	ಜಲಕ್ರೀಡೆಗಳು
ಕಬಿನಿ ರಿವರ್ ಲಾಡ್ಜ್	ಮೀನು ಹಿಡಿಯುವುದು ಮತ್ತು ವನ್ಯಮೃಗ
ಕೆಮ್ಮಣ್ಣುಗುಂಡಿ	ಚಾರಣ ಪ್ರವಾಸ (ಟ್ರೆಕ್ಕಿಂಗ್)
ಮೇಕೆದಾಟು	ರಾಷ್ಟ್ರೀಯ ಸೌಂದರ್ಯ
ಮೈಸೂರು	ಅರಮನೆಗಳ ನಗರ ಹುಲ್ಲುಗಾವಲಿನ ಚೆಂಡಾಟ (ಗಾಲ್ಫ್)
ಮಡಿಕೇರಿ	ಪ್ರಾಕೃತಿಕ ಸೌಂದರ್ಯ, ಹುಲ್ಲುಗಾವಲಿನ ಚೆಂಡಾಂಟ(ಗಾಲ್ಫ್) ಕಾಫಿ ತೋಟಗಳು ಚಾರಣ ಪ್ರವಾಸ.
ನಂಜನಗೂಡು	ಯಾತ್ರಾಸ್ಥಳ
ನಂದಿಬೆಟ್ಟ	ಬೆಂಗಳೂರು ಸಮೀಪದ ವಿಹಾರ ಕೇಂದ್ರ
ನಾಗರಹೊಳೆ	ರಾಷ್ಟ್ರೀಯ ಉದ್ಯಾನವನ
ರಾಮನಗರ	ಶಿಲಾರೋಹಣ (ರಾಕ್ ಕ್ಲೈಂಬಿಂಗ್)
ಶ್ರೀರಂಗಪಟ್ಟಣ	ಹೈದರಾಲಿ ಮತ್ತು ಟಿಪ್ಪುಸುಲ್ತಾನನ ರಾಜಧಾನಿಯ ಅವಶೇಷಗಳು
ಶಿವನಸಮುದ್ರ	ಜಲಪಾತ
ಸೋಮನಾಥಪುರ	ದೇವಸ್ಥಾನ
ಶ್ರವಣಬೆಳಗೊಳ	ಜೈನರ ಯಾತ್ರಾ ಸ್ಥಳ
ಯಡಿಯೂರು	ಹೆದ್ದಾರಿ ಸೌಲಭ್ಯ

ಉತ್ತರ ವೃತ್ತ

ಅಲಮಟ್ಟಿ ಅಣೆಕಟ್ಟು	ಜಲಕ್ರೀಡೆಗಳು
ಐಹೊಳೆ	ಕಲ್ಲಿನಲ್ಲಿ ನಿರ್ಮಿತ ದೇವಾಲಯಗಳ ವಾಸ್ತುಶಿಲ್ಪ
ಬಿಜಾಪುರ	ಗೋರಿ, ಮಸೀದಿಗಳು, ಅರಮನೆಗಳು, ಕೋಟೆಗಳು
ಬಳ್ಳಾರಿ	ಪೂರ್ವ ಭಾರತದಿಂದ ಉತ್ತರ ವೃತ್ತಕ್ಕೆ ಪ್ರವೇಶಿಸಲು ಪ್ರಮುಖವಾಗಿ ಹಂಪಿ ಹೊಸ ಪೇಟೆಗಳಿಗೆ ಹೋಗಲು ಪ್ರವೇಶ ದ್ವಾರ.
ಬೆಳಗಾಂ	ಗೋವಾದಿಂದ ಉತ್ತರ ವೃತ್ತಕ್ಕೆ ಪ್ರವೇಶಿಸಲು ಪ್ರವೇಶದ್ವಾರ
ಬಾದಾಮಿ	ಹಿಂದು ಮತ್ತು ಜೈನ ಗುಹಾಂತರ ದೇವಾಲಯ
ಬೀದರ್	ಕೋಟೆ ಮತ್ತು ಹಿಂದಿನ ಅರಸರ ಸ್ಮಾರಕಗಳು
ಗದಗ	ಹೆದ್ದಾರಿ ಸೌಲಭ್ಯ
ಹಂಪಿ	ವಿಜಯನಗರ ಸಾಮ್ರಾಜ್ಯದ ಪಳಿಯುಳಿಕೆಗಳು
ಹೊಸಪೇಟೆ	ಹಂಪಿ ಮತ್ತು ತುಂಗಭದ್ರ ಅಣೆಕಟ್ಟಿಗೆ ಹೋಗಲು ಪ್ರವೇಶ ದ್ವಾರ
ಲೋಕಾಪುರ	ಹೆದ್ದಾರಿ ಸೌಲಭ್ಯ
ಪಟ್ಟದಕಲ್ಲು	ದೇವಸ್ಥಾನ ವಾಸ್ತುಶಿಲ್ಪ
ತುಂಗಭದ್ರ ಅಣೆಕಟ್ಟು	ಜಲಕ್ರೀಡೆಗಳು

ಶ್ರೀ ಪ್ರಭಾಕರ್ ಎಸ್. ರಾಣೆ : ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಈ ರಾಜ್ಯದ ಪ್ರವಾಸಿ ಕೇಂದ್ರವನ್ನು ಅಭಿವೃದ್ಧಿಪಡಿಸಲು ಹಾಗೂ ಪ್ರವಾಸೋದ್ಯಮ ಇಲಾಖೆಗೆ ಕಾಯಕಲ್ಪ ಮಾಡಲು ಜಪಾನ್ ಸಂಸ್ಥೆಯಿಂದ ಧನಸಹಾಯ ಕೊಡುವ ಕುರಿತು, ಯೋಜನೆಯನ್ನು ಕೇಂದ್ರಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಆದರೆ ಜಪಾನ್ ಸರ್ಕಾರದ ಆರ್ಥಿಕ ನೆರವಿನ ಪಟ್ಟಿಯಲ್ಲಿ ಈ ಯೋಜನೆಯನ್ನು 1991-92ನೇ ಸಾಲಿನಲ್ಲಿ ಸೇರಿಸುವುದಿಲ್ಲಾ ಎಂದು ಹೇಳಿದ್ದಾರೆ. ಈ ಪ್ರವಾಸೋದ್ಯಮದ ಈ ಯೋಜನೆ ನಿಜವಾಗಿಯೂ ಕರ್ನಾಟಕ ಸರ್ಕಾರಕ್ಕೆ ಅತ್ಯಂತ ಪ್ರಯೋಜನಕಾರಿಯಾದಂಥ ಯೋಜನೆ, ಅತೀ ಮಹತ್ವದ ಯೋಜನೆ. ರಾಜ್ಯದ ಅಭಿವೃದ್ಧಿಯಲ್ಲಿ ಅತಿಯಾದಂಥ ಒಂದು ಮಹತ್ವ ಪಾತ್ರವನ್ನು ವಹಿಸುವಂಥ ಯೋಜನೆ. ಈ ಯೋಜನೆ ಬಗ್ಗೆ 1991-92ನೇ ಪಟ್ಟಿಯಲ್ಲಿ ಸೇರಿಸುವಂತೆ ರಾಜ್ಯಸರ್ಕಾರ ಕೈಗೊಂಡ ಪ್ರಯತ್ನ ಏನು?

ಅಥವಾ ಕೇವಲ ಈ ಪಟ್ಟಿಯನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿ ಸುಮ್ಮನೆ ಕುಳಿತುಕೊಂಡಿದ್ದೀರಾ ಇಲ್ಲದಿದ್ದರೆ ನಿಮ್ಮ ಪ್ರಯತ್ನ ಮಾಡಿಯೂ ಸೇರಿಸದೇ ಇರುವುದಕ್ಕೆ ಕಾರಣ ಏನು ಎಂದು ಮಾನ್ಯ ಸಚಿವರು ತಿಳಿಸಬೇಕು. ಇನ್ನು ಎರಡನೆಯದಾಗಿ ಇವರು ಈ ಯೋಜನೆಯಲ್ಲಿ ಯಾವ ಯಾವ ಕೇಂದ್ರಗಳನ್ನು ನೀವು ಅರಿಸಿಕೊಂಡಿದ್ದೀರಿ ಎನ್ನುವುದಕ್ಕೆ ಒಂದು ಪಟ್ಟಿ ಕೊಟ್ಟಿಲ್ಲ. ಅದರಲ್ಲಿ ವೃತ್ತಗಳನ್ನು ಮಾಡಿದ್ದಾರೆ. ಒಂದು ದಕ್ಷಿಣ ವೃತ್ತ, ಇನ್ನೊಂದು ಉತ್ತರ ವೃತ್ತ ಎಂದು ಮಾಡಿದ್ದಾರೆ. ಅಧ್ಯಕ್ಷರೆ, ದಕ್ಷಿಣ ವೃತ್ತದಲ್ಲಿ ಸುಮಾರು 35 ಸ್ಥಳಗಳನ್ನು ಆಯ್ಕೆ ಮಾಡಿದ್ದಾರೆ, ಅದೇ ಉತ್ತರ ವೃತ್ತದಲ್ಲಿ ಉತ್ತರ ಕರ್ನಾಟಕ ಸೇರಿಸುವಂಥ ಉತ್ತರ ವೃತ್ತದಲ್ಲಿ ಕೇವಲ 13 ಸ್ಥಳಗಳನ್ನು ಮಾತ್ರ ಆಯ್ಕೆ ಮಾಡಿದ್ದಾರೆ. ಈ ತಾರತಮ್ಯಕ್ಕೆ ಕಾರಣ ಏನು? ಉತ್ತರ ಕರ್ನಾಟಕದಲ್ಲಿ ಪ್ರವಾಸಿ ಕೇಂದ್ರಗಳಾಗಿ ಅಭಿವೃದ್ಧಿಪಡಿಸುವಂಥ ಸ್ಥಳಗಳ ಅಭಾವ ಇದೆಯೇ ಈ ತಾರತಮ್ಯಕ್ಕೆ ಕಾರಣ ಏನು ಎಂದು ತಿಳಿಸಬೇಕು.

ಶ್ರೀ ಕೆ. ಶಿವಮೂರ್ತಿ : ಅಧ್ಯಕ್ಷರೆ, ಕೇಂದ್ರಸರ್ಕಾರ 1990-91ರ ಸಾಲಿನಲ್ಲಿ 160.40 ಲಕ್ಷಕ್ಕೆ ಒಂದು ಯೋಜನೆ ಮಾಡಿ ಪ್ರವಾಸೋದ್ಯಮ ಹೆಚ್ಚಿಗೆ ಮಾಡಬೇಕು ಅದಕ್ಕೋಸ್ಕರ ಈ ಜಪಾನ್ ದೇಶದವರ ಒಂದು ಅಸಿಸ್ಟೆನ್ಸ್‌ನಲ್ಲಿ ಕೇಂದ್ರಸರ್ಕಾರದವರು ನಮಗೆ ಒಂದು ಸೂಚನೆ ಕೊಟ್ಟಿದ್ದರು. 140 ಕೋಟಿ 40 ಲಕ್ಷಕ್ಕೆ ಒಂದು ಯೋಜನೆ ಮಾಡಿ ಎಂದು ಹೇಳಿದ ಪ್ರಕಾರ ಆ ರೀತಿಯಲ್ಲಿ ನಮ್ಮ ಸರ್ಕಾರ ಯೋಜನೆ ಮಾಡಿ ಸಲ್ಲಿಸಲಾಯಿತು. ಸಲ್ಲಿಸದಾಗ ಮತ್ತೇ ಅದನ್ನು ರಿವೈಸ್ ಮಾಡಿ ಎಂದು ಹೇಳಿದಾಗ ನಾವು 110 ಕೋಟಿಗೆ ರಿವೈಸ್ ಮಾಡಿ ಕಳುಹಿಸಿಕೊಟ್ಟಿವು. 110 ಕೋಟಿ 40 ಲಕ್ಷಕ್ಕೆ ಮತ್ತೆ ಮಾಡಿದೆವು. ಮತ್ತೆ ಅವರು 1990-91ರಲ್ಲಿ ಕೇಳಿದಾಗ ಈಗ ಪತ್ರ ಬಂದಿದೆ ಕೇಂದ್ರಸರ್ಕಾರದಿಂದ, ಈ ಸಾರಿ ನಾವು ಕೊಡಲಿಕಾಕಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದರಾ. ನಿಮಗೇನಾದರೂ ಜಪಾನ್ ಸರ್ಕಾರದ ಸಹಾಯ ಬೇಕೆಂದರೆ, ಹಣ ಬೇಕೆಂದರೆ, ನಿಮ್ಮ ಸರ್ಕಾರಕ್ಕೆ ಇಚ್ಛೆ ಇದ್ದರೆ, ನೀವು 1992-93ಕ್ಕೆ ಮತ್ತೆ ರಿವೈಸ್ ಮಾಡಿ ಕಳುಹಿಸಿಕೊಡಿ ಎನ್ನುವ ಮಾತನ್ನು ಹೇಳಿದ್ದಾರೆ. ಅದೇ ರೀತಿ ನಮ್ಮ ನಿರ್ದೇಶಕರಿಗೆ ಹೇಳಿದ್ದೇನೆ. ಕೇಂದ್ರಸರ್ಕಾರಕ್ಕೆ ನಾವು ಪತ್ರ ಬರೆದು, ಇದನ್ನು ನೀವು ಮುಂದಕ್ಕಾದರೂ 1992-93ಕ್ಕೆ ಆದರೂ ಸೇರಿಸಿಕೊಡಬೇಕು ಎಂದು ಹೇಳಿದ್ದೇನೆ. ನನ್ನ ಅನಿಸಿಕೆಯಲ್ಲಿ ಇದು ಒಂದು ತರಹ ಮರೀಚಿಕೆಯಾಗಿಬಿಟ್ಟಿದೆ. ಈ 110.60 ಕೋಟಿಯಲ್ಲಿ ನಮ್ಮ ಕರಾವಳಿ ಬಿಟ್ಟುಹೋಗಿದೆ ಎಂದು ಹೇಳತಕ್ಕಂಥ ಮಾನ್ಯ ಸದಸ್ಯರ ಅನಿಸಿಕೆ ಇದೆ. ನಾವು ಉತ್ತರ ಕರ್ನಾಟಕದ್ದು ಹೇಳುತ್ತಿದ್ದೇವೆ. ಅದರಲ್ಲೂ ಕರಾವಳಿಯೆಲ್ಲಾ ಸೇರಿಸಿ 160 ಕೋಟಿರೂಪಾಯಿ ಯೋಜನೆ ಮಾಡಿ ಕಳುಹಿಸಿದಾಗ, ಕೇಂದ್ರಸರ್ಕಾರದವರು ಮತ್ತು ಜಪಾನ್ ಪ್ರತಿನಿಧಿಗಳು ಸೇರಿ ಮಾತನಾಡಿದಾಗ, ನೀವು ಇದಕ್ಕೆ ಪ್ರಿಯಾರಿಟಿ ಕೊಡಬೇಕೆಂಬ ಗೈಡ್‌ಲೈನ್ಸ್ ಹಾಕಿದ್ದಾರೆ ಐಡೆಂಟಿಫೈ ಆಗಿರತಕ್ಕಂಥ ಪ್ರವಾಸೋದ್ಯಮ ಜಾಗಗಳಿಗೆ ಮೊದಲು ಆದ್ಯತೆ ಕೊಡಬೇಕೆಂದು ಹೇಳಿದಾಗ ಕೆಲವು ಜಾಗ ಬಿಟ್ಟಿರತಕ್ಕದ್ದು ನಿಜ.

ಶ್ರೀ ಗೋಪಿನಾಥ ಆರ್ ಸಾಂದ್ರ : ಉತ್ತರ ಭಾಗದ್ದು ಬಿಟ್ಟು ಹೋಗಿದೆ.

ಶ್ರೀ ಕೆ. ಶಿವಮೂರ್ತಿ : ಈಗ ಎರಡು ಪಟ್ಟಿ ಮಾಡಿದ್ದೇವೆ. ದಕ್ಷಿಣ ವೃತ್ತ ಮತ್ತು ಉತ್ತರ ವೃತ್ತ ಎಂದು ಎರಡು ಮಾಡಿದ್ದೇವೆ. ಇದನ್ನು ನಾವು ಐಡೆಂಟಿಫೈ ಮಾಡಿದ ಮೇಲೆ ಅವರೂ ಸಹ ಅದನ್ನು ಸ್ಪಡಿ ಮಾಡಿಬಿಟ್ಟು, ನೀವು ಇದಕ್ಕೆ ಪ್ರಿಯಾರಿಟಿ ಕೊಡಬೇಕು, ಇದಕ್ಕೆ ಕೊಡಬಾರದು ಎಂದು ಹೇಳತಕ್ಕ ಒಂದು ಪಟ್ಟಿಯನ್ನು ಅವರ ಪ್ರತಿನಿಧಿಗಳು ಬಂದಾಗ, ಕೇಂದ್ರ ಸರ್ಕಾರದ ಅಧಿಕಾರಿಗಳು

ಇದ್ದಾಗ, ನಮ್ಮ ರಾಜ್ಯಸರ್ಕಾರದ ಅಧಿಕಾರಿಗಳು ಇದ್ದಾಗ ಇದು ಪಟ್ಟಿ ಮಾಡಿರತಕ್ಕಂತಾದ್ದು ಆಗಿದೆ. ಈ ಯೋಜನೆಗಳಿಗೆ ಪ್ರಿಯಾರಿಟಿ ಕೊಡಬೇಕೆಂದು ಹೇಳಿದ್ದಾರೆ. ಅದನ್ನೆಲ್ಲಾ ಪಟ್ಟಿ ಮಾಡಿ ಕಳುಹಿಸಿದರೂ ಸಹ ಅವರು ಏನು ಹೇಳುತ್ತಾರೆ, ಎಂದರೆ ಇದು ನನ್ನ ಅನಿಸಿಕೆಯಲ್ಲಿ ಮರೀಚಿಕೆಯಾಗಿದೆ. ಈಗ ಮಾನ್ಯ ಸದಸ್ಯರು ಉತ್ತರ ಭಾಗಕ್ಕೆ ಆದ್ಯತೆ ಸಿಕ್ಕಿಲ್ಲ. ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಆದ್ದರಿಂದ, ನಾವು ನಮ್ಮ ಹಣಕಾಸಿನ ವ್ಯಾಪ್ತಿಯಲ್ಲಿ ಈ ಸಲ ತೆಗೆದಕೊಳ್ಳುತ್ತಿದ್ದೇವೆ. ಆದ್ಯತೆ ಮೇಲೆ ನಮ್ಮ ಹಣಕಾಸಿನ ಲಭ್ಯತೆ ಎಷ್ಟಿದೆ ಅದರ ಆಧಾರದ ಮೇಲೆ ಅಂತಹ ಪ್ರವಾಸ ಸ್ಥಳ ಇದ್ದರೆ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ಹಣ ಬೇಕೆಂದು ಹೇಳಿ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಪತ್ರಬರೆದಿದ್ದಾರೆ. ನಾನು ನಮ್ಮ ಕರ್ನಾಟಕ ರಾಜ್ಯದ ಎಲ್ಲಾ ಸಂಸತ್ ಸದಸ್ಯರುಗಳಿಗೂ ಪತ್ರ ಬರೆದು ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕೆಂದು ಹೇಳಿದ್ದೇನೆ. ಮತ್ತು ಹಣಕಾಸು ಮಂತ್ರಿಗಳಿಗೂ ಪತ್ರ ಬರೆದಿದ್ದೇನೆ.

ಶ್ರೀ ಪ್ರಭಾಕರ್ ಎಸ್. ರಾಣೆ : ಅಧ್ಯಕ್ಷರೆ, ಮಾನ್ಯ ಸಚಿವರು ತಾವು ಕಳುಹಿಸಿದಂಥ ಪಟ್ಟಿಯಲ್ಲಿ ಇಂತಹವುಗಳನ್ನು ಬಿಡಬೇಕೆಂದು ಹೇಳಿ ಕೇಂದ್ರಸರ್ಕಾರವೇ ಸೂಚನೆ ಮಾಡಿತ್ತು ಎಂದು ಹೇಳಿದ್ದಾರೆ. ನಾನು ಕೇಳುವುದಿಷ್ಟೆ, ಇವೊತ್ತು ರಾಜ್ಯದಲ್ಲಿ ಪ್ರವಾಸಿ ಕೇಂದ್ರವನ್ನಾಗಿ ಯಾವ ಪ್ರದೇಶಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಹೇಳುವುದಕ್ಕೆ ಕೇಂದ್ರಕ್ಕಿಂತಲೂ ರಾಜ್ಯಕ್ಕೆ ತಿಳುವಳಿಕೆ ಹೆಚ್ಚು ಇರುತ್ತದೆ ಅಧಿಕಾರ ಹೆಚ್ಚು ಇರುತ್ತದೆ. ಇವೊತ್ತು ಅದು, ಯೋಜನೆ ಯಾವುದೇ ಆಗಿರಲಿ, ರಾಜ್ಯಸರ್ಕಾರದ್ದು ಆಗಿರಬಹುದು, ಕೇಂದ್ರಸರ್ಕಾರದ್ದು ಆಗಿರಬಹುದು. ನಾನು ಇವೊತ್ತು ಕೇಳುತ್ತಿರುವುದು, ಇದು ರಾಜ್ಯಸರ್ಕಾರದ ಜವಾಬ್ದಾರಿ ಆಗಿರಲಿಲ್ಲವೇ? ನಮ್ಮ ಕನ್ನಡದ ಖ್ಯಾತ ಸಾಹಿತಿಗಳಾದಂಥ ಶಿವರಾಮ್ ಕಾರಂತರ ಉತ್ತರ ಕನ್ನಡ ಜಿಲ್ಲೆಯ ಒಂದು ಸ್ಥಳಕ್ಕೆ ಬೇಟಿ ನೀಡಿದಾಗ ಅವರು ತಮ್ಮ ಸ್ವಜರ್‌ಲೆಂಡಿನ ಪ್ರವಾಸವನ್ನು ನೆನಪು ಮಾಡಿಕೊಳ್ಳುತ್ತಾ ಉತ್ತರ ಕನ್ನಡ ಜಿಲ್ಲೆ ಯಾವ ದೃಷ್ಟಿಯಿಂದಲೂ, ಸ್ವಿಟ್‌ಜರ್‌ಲೆಂಡಿಗಿಂಥ ಸೃಷ್ಟಿ ಸೌಂದರ್ಯದಲ್ಲಿ ಇದು ಕಡಿಮೆ ಇಲ್ಲ ಎಂದು ಹೇಳಿದ್ದಾರೆ. ಇಡೀ ಜಿಲ್ಲೆಯನ್ನು ಪ್ರವಾಸಿ ಕೇಂದ್ರವನ್ನಾಗಿ, ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಈ ರೀತಿ ಇರುವಾಗ, ರಾಜ್ಯಸರ್ಕಾರ ಜವಾಬ್ದಾರಿ ವಹಿಸಿ ಅವರಿಗೆ ಮನವರಿಕೆ ಮಾಡಿಕೊಡಬೇಕು ಇದು ಒಂದು ಇನ್ನು ಎರಡನೆಯದು, ತಾವು ಪಟ್ಟಿ ಮಾಡಿದಾಗ ದಕ್ಷಿಣ ವೃತ್ತ ಮತ್ತು ಉತ್ತರ ವೃತ್ತ ಎಂದು ಮಾಡಿದಾಗ ದಕ್ಷಿಣ ವೃತ್ತದಲ್ಲಿ 35 ಸ್ಥಳಗಳು ಮತ್ತು ಉತ್ತರ ವೃತ್ತದಲ್ಲಿ ಕೇವಲ 13 ಸ್ಥಳಗಳು. ಆ 13 ಸ್ಥಳಗಳಲ್ಲಿಯೂ ಸಹ ನಿಮ್ಮ ಕಣ್ಣುತಪ್ಪಿಸಿ ಅಥವಾ ಉದ್ದೇಶಪೂರ್ವಕವಾಗಿಯೇ ಉತ್ತರ ಕನ್ನಡ ಜಿಲ್ಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದಾರೆ. ಏತಕ್ಕೆ ಎಂದು ಕೇಳುತ್ತಿದ್ದೇನೆ. ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆ ಇಲ್ಲವೋ ಎಂದು ಈ ಸರ್ಕಾರ ಸ್ಪಷ್ಟಪಡಿಸಬೇಕು.

ಶ್ರೀ ಕೆ. ಶಿವಮೂರ್ತಿ : ನಮ್ಮ ಉತ್ತರ ಕರ್ನಾಟಕ ಏರಿಯಾವನ್ನು ಬಿಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅಲ್ಲಿ ಸೀಬೀಚ್ ಇದೆ. ಕರಾವಳಿ ಪ್ರದೇಶ ಇರತಕ್ಕಂಥ ಕಡೆ ಇಲ್ಲಿ ಸಾಕಷ್ಟು ಮಟ್ಟಿಗೆ ಕೆಲವು ಪ್ರೈವೇಟ್‌ನವರು ಆಗಲೇ ಸೀಬೀಚ್ ಡೆವಲಪ್ ಮಾಡಿದ್ದಾರೆ. ಈಗ ನಾವು ಸಹ ಕರಾವಳಿಯಲ್ಲಿರತಕ್ಕಂದ್ದು ಪಟ್ಟಿಯಲ್ಲಿ ಸೇರಿಸಿದ್ದೇವೆ, ಪ್ರಾಜೆಕ್ಟ್‌ನಲ್ಲಿ ಸೇರಿಸಿದ್ದೇವೆ. ಈಗ ಅವರು ಐಡೆಂಟಿಫೈ ಮಾಡಿರತಕ್ಕ ಜಾಗ ಏನು ಹೇಳಿದ್ದಾರೆ, ಆ ಬಗ್ಗೆ ಹೇಳಬೇಕೆಂದರೆ, ಯಾವ ಪ್ರವಾಸೋದ್ಯಮ ಜಾಗ ಇದೆ, ಅಲ್ಲಿ ಪ್ರಯಾರಿಟಿ ಕೊಡಬೇಕೆಂಬ ಉದ್ದೇಶದಿಂದ ಬಿಟ್ಟಿದ್ದೇವೆಯೆ ಹೊರತು, ಬೇರೆ ಕಾರಣಕ್ಕೋಸ್ಕರ ಅಲ್ಲ. ಈಗ ಉತ್ತರ ಭಾಗಕ್ಕೆ

ಹೆಚ್ಚು ಆದ್ಯತೆ ಕೊಟ್ಟಿಲ್ಲ ಎಂದು ಮಾನ್ಯ ಸಾಂದ್ರ ಅವರು ಹೇಳಿದ್ದಾರೆ. ಈಗ ನಾವು ಇಟ್ಟಿರತಕ್ಕ 110 ಕೋಟಿ ರೂಪಾಯಿಯಲ್ಲಿ 53 ಪರ್ಸೆಂಟ್‌ಗೂ ಜಾಸ್ತಿ ಹಣವನ್ನು ಉತ್ತರ ಭಾಗಕ್ಕೆ ಇಟ್ಟಿದ್ದೇವೆ. ಅಲ್ಲಿರತಕ್ಕಂಥ ಸ್ಥಳಗಳ ಸಂಖ್ಯೆ ಕಡಿಮೆ ಇರಬಹುದು. ಕೆಲಸ ಮತ್ತು ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಅಲ್ಲಿಗೆ 50 ಪರ್ಸೆಂಟ್ ಇಟ್ಟಿದ್ದೇವೆ. ಎನ್ನುವುದನ್ನು ಮಾನ್ಯ ಸದಸ್ಯರಿಗೆ ಮನನ ಮಾಡಿಕೊಡುತ್ತೇನೆ.

12.45 ಪಿ.ಎಂ.

ಶ್ರೀ ಡಿ.ಎ. ಚಿನ್ನಪ್ಪ : ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಮಡಕೇರಿ ಎಂದು ಹಾಕಿದ್ದೀರಿ. ಮತ್ತು ಅದು ಪ್ರಕೃತಿ ಸೌಂದರ್ಯವನ್ನು ಹೊಂದಿರುವ ಹುಲ್ಲುಗಾವಲು, ಗೌಲ್ಫ್‌ಗ್ರೌಂಡ್ ಮತ್ತು ಕಾಕ್ಸ್ ಗ್ರೌಂಡ್ ಎಂದೂ ಕೂಡ ಹೇಳಿದ್ದೀರಿ. ಆದರೆ ಸರಿಯಾದ ಜಾಗಗಳನ್ನು ಗುರುತಿಸಿ ವಿವರಣೆ ಮಾಡಲಿಕ್ಕೆ ಹೋಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕಳೆದ ಡಿಸೆಂಬರ್ 22ರಲ್ಲಿ ಅಲ್ಲಿಗೆ ಬಂದಿದ್ದಾಗ ಕೊಡಗು ಜಿಲ್ಲೆಯನ್ನು ಪ್ರವಾಸೋದ್ಯಮ ಜಿಲ್ಲೆಯನ್ನಾಗಿ ಮಾಡುತ್ತೇವೆಂದು ನಮ್ಮಲ್ಲಿ ಆಶ್ವಾಸನೆಯನ್ನು ಕೊಟ್ಟುಬಂದಿದ್ದರು. ಈ ಜಾಗವನ್ನು ಐಡೆಂಟಿಫೈ ಮಾಡತಕ್ಕಂಥ ಕಾಲದಲ್ಲಿ ಮಾನ್ಯ ಮಂತ್ರಿಗಳು ನಮ್ಮ ವಿಚಾರಣೆ ಮಾಡಿ ಐಡೆಂಟಿಫೈ ಮಾಡುತ್ತಾರೆಯೇ ಎಂದು ಕೇಳುತ್ತೇನೆ. ಏತಕ್ಕೆಂದರೆ ಜನರಲ್ ಆಗಿ ಕೊಟ್ಟಿದ್ದಾರೆ. That is an important place. People go there for pleasure. ಆ ಜಾಗವನ್ನು ತಾವು ತೋರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಎಸ್. ರಾಣೆ : ಮಾನ್ಯ ಅಧ್ಯಕ್ಷರೇ, ಇದನ್ನು ಅರ್ಧಗಂಟೆಕಾಲದ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಇದಕ್ಕೆ ಅರ್ಧಗಂಟೆ ಕಾಲದ ಚರ್ಚೆಗೆ ಅವಕಾಶಮಾಡಿಕೊಡೋಣ.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ ಬೆಳಗಾಂ ಜಿಲ್ಲೆಗೆ ಬಹಳಷ್ಟು ಅನ್ಯಾಯವಾಗಿದೆ. ಆ ಅನ್ಯಾಯವನ್ನು ಸರಿಪಡಿಸಲಿಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಎರಡನೆಯದಾಗಿ ಬೆಳಗಾಮ್ ಡೆವಲಪ್‌ಮೆಂಟ್ ಕೆಲಸಗಳನ್ನು ತೆಗೆದುಕೊಳ್ಳುವಾಗ ಈ ಕೆಲಸಗಳನ್ನು ಸಹಿತ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಉದಾಹರಣೆಗೆ ಸದ್ದಲಿಗೆ, ಬೆಳಗಾಮ್‌ನಲ್ಲಿ ಎಲ್ಲಮ್ಮಗುಡ್ಡ, ಮತ್ತು ಗೋಕಾಕ್ ಇವೆಲ್ಲಾ ಪ್ರೇಕ್ಷಣೀಯ ಸ್ಥಳಗಳಿರುತ್ತವೆ. ಇದನ್ನೂ ಸಹಿತ ಅಭಿವೃದ್ಧಿಗೊಳಿಸಲು ಸೂಕ್ತ ಕ್ರಮಗಳನ್ನು ಹಾಕಿಕೊಂಡು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಸೌಂದರ್ಯ ಪ್ರೇಕ್ಷಣೀಯ ಸ್ಥಳಗಳಿಗೆ ಏನೂ ಕೊರತೆ ಇಲ್ಲ ಬೇಕಾದಷ್ಟು ಇದೆ. ಅದನ್ನು ಡೆವಲಪ್‌ಮಾಡಲಿಕ್ಕೆ ಹಣಕಾಸಿನ ಕೊರತೆ ಇದೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಾವು ಮಾಡಬೇಕಾಗುತ್ತದೆ. ಟ್ಯೂರಿಸ್ಟ್ ಪಾಯಿಂಟ್ ಆಫ್ ವ್ಯೂನಿಂದ ಯಾವ ಜಾಗವನ್ನೂ ಐಡೆಂಟಿಫೈ ಮಾಡಿಲ್ಲ. ಪ್ರಾಶಸ್ತ್ಯ ಕೊಟ್ಟಿಲ್ಲವೆನ್ನುವ ದೃಷ್ಟಿಯಿಂದ ನಾವು ಆದನ್ನು ಹುಡುಕಿ ನಮ್ಮ ಇಲಾಖೆಯ ವತಿಯಿಂದ ನಮ್ಮ ಅಧಿಕಾರಿಗಳನ್ನು ಕಳುಹಿಸುತ್ತೇವೆ. ಯಾವುದು ಪ್ರೇಕ್ಷಣೀಯ ಸ್ಥಳಗಳೆಂದು ಪಟ್ಟಿಯನ್ನು ತರಿಸಿಕೊಂಡು ನೋಡುತ್ತೇವೆ. ಈ ಪ್ರೇಕ್ಷಣೀಯ ಸ್ಥಳಗಳನ್ನು ಡೆವಲಪ್‌ಮೆಂಟ್ ಮಾಡಬೇಕೆನ್ನುವ ದೃಷ್ಟಿಯಿಂದ ಹಣವನ್ನು ಇಟ್ಟಿದ್ದೇವೆ. ಲಾಭದಾಯಕವಾಗಿದ್ದರೆ, ಅದರ

ಆಧಾರವನ್ನಿಟ್ಟುಕೊಂಡು ಎಷ್ಟು ಹಣ ಇದೆಯೋ ಅಷ್ಟನ್ನು ಈ ಯೋಜನೆಯಲ್ಲಿ ತೊಡಗಿಸುತ್ತೇವೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಕೊಟ್ಟಿರುವ ಪಟ್ಟಿಯಲ್ಲಿ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಸಾಕಷ್ಟು ಪ್ರವಾಸಿ ಕೇಂದ್ರಗಳಿವೆ. ನಾನು ಹೇಳುವಂಥ ಉದ್ದೇಶವಾದರೂ ಇಷ್ಟೇ. ಬೆಂಗಳೂರು ಮೈಸೂರು ಭಾಗದಲ್ಲಿ ಹಳೆಯ ಮೈಸೂರಿನಲ್ಲಿ ಸಾಕಷ್ಟು ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿ ಮಾಡಿದ್ದೀರಿ. ಅದೇ ಪ್ರಕಾರ ಉತ್ತರ ಕರ್ನಾಟಕದ ಕೊನೆ ಭಾಗದಲ್ಲಿ ಇರುವ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಸಾಕಷ್ಟು ಪ್ರೇಕ್ಷಣೀಯ ಸ್ಥಳಗಳಿವೆ. ಅವುಗಳನ್ನೇನಾದರೂ ಪ್ರೇಕ್ಷಣೀಯ ಸ್ಥಳಗಳೆಂದು ಪರಿಗಣನೆ ಮಾಡುತ್ತೀರಾ? ಇನ್ನು ಎರಡನೆಯ ಪ್ರಶ್ನೆ ಏನೆಂದರೆ ಹಿಂದೆ ನಮ್ಮ ಸರ್ಕಾರದ ಇದ್ದಂಥ ಸಂದರ್ಭದಲ್ಲಿ ಬಸವಕಲ್ಯಾಣಕ್ಕೆ ಕೇಂದ್ರ ಸರ್ಕಾರದ ನೆರವಿನಿಂದ "ಯಾತ್ರಿಕ್" ಎನ್ನುವ ಸ್ಕೀಮ್ ಮಂಜೂರಾತಿಯಾಗಿತ್ತು. ಅದಕ್ಕೆ ಬೇಕಾದ ಸ್ಥಳವನ್ನೂ ಕೂಡ ತೆಗೆದುಕೊಂಡಿರುತ್ತಾರೆ. ಇದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕು ಉತ್ತರ ಕರ್ನಾಟಕದ ಗುಲ್ಬರ್ಗಾ ಮತ್ತು ಬೀದರ, ಹೈದರಾಬಾದ್ ಕರ್ನಾಟಕ ಏರಿಯಾ ಎಂದು ಅದಕ್ಕೆ ಹೆಚ್ಚಿನ ಗಮನ ಕೊಡುತ್ತಾರೆಯೇ ಎನ್ನುವ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಹೇಳಬೇಕು.

ಶ್ರೀ ಕೆ. ಶಿವಮೂರ್ತಿ : ನಾನು ಮಾನ್ಯ ವಿರೋಧಪಕ್ಷದ ನಾಯಕರ ಸಭೆಯನ್ನು ಕರೆದು ಚರ್ಚೆಮಾಡಿದಾಗ ಹಣದ ಲಭ್ಯತೆಯ ಬಗ್ಗೆ ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿರುವಂತೆ ಬೀದರೆ ಜಿಲ್ಲೆ ಒಂದು ಐತಿಹಾಸಿಕವಾದ ಜಾಗ. ನಾವು ಈಗಾಗಲೇ ಕೇಂದ್ರ ಸರ್ಕಾರದ ಯೋಜನೆಯ ಅಡಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿರುತ್ತೇವೆ. ಕೆಲವು ಕನ್‌ಸ್ಟ್ರಕ್ಷನ್ ಕಾರ್ಯ ನಡೆಯುತ್ತಿದೆ. ಈಗ ಹೈದರಾಬಾದ್ ಕರ್ನಾಟಕ ಬೋರ್ಡ್‌ನಲ್ಲಿ ದುಡ್ಡಿದೆ. ಅದಕ್ಕೋಸ್ಕರ ನಾವು ಪತ್ರ ಬರೆದಿದ್ದೇವೆ. ಆ ಭಾಗವನ್ನು ಟ್ಯೂರಿಸ್ಟ್ ಪಾಯಿಂಟ್ ಆಫ್ ವ್ಯೂನಿಂದ ಡೆವಲಪ್ ಮಾಡತಕ್ಕಂಥದ್ದು ಏನು ಇದೆ ಅದನ್ನು ಗಮನಿಸುತ್ತೇವೆ. ಅದಕ್ಕೋಸ್ಕರವಾಗಿ ಹಣವನ್ನು ದಯವಿಟ್ಟು ಕೊಡಿ ಎಂದು ನಾವು ಪತ್ರವನ್ನು ಬರೆದಿದ್ದೇವೆ, ಮತ್ತು ಸದ್ಯಕ್ಕೆ ಅವರು ಜೊತೆಯಲ್ಲಿ ಕುಳಿತು ಮಾತನಾಡಿ ಎಷ್ಟು ಹಣವನ್ನು ಕೊಡಲಿಕ್ಕೆ ಸಾಧ್ಯವೋ ಅಷ್ಟು ಹಣವನ್ನು ಕೊಡಿ ಎಂದು ಕೇಳಿ ತೆಗೆದುಕೊಳ್ಳುತ್ತೇವೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡಜಿಲ್ಲೆ ಕರಾವಳಿ ಪ್ರದೇಶವಾಗಿರುವುದರಿಂದ ಅನೇಕ ಕಡೆಗಳಲ್ಲಿ ಪ್ರವಾಸಿ ಕೇಂದ್ರಗಳಾಗಿವೆ. ಆದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಬೇಕೆಂದು ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೇ ಕರ್ನಾಟಕದಲ್ಲಿ ಕರಾವಳಿ, ಕೋಸ್ಟಲ್ ಏರಿಯಾದ ಕೆಲವು ಬೀಚ್‌ಗಳು ಏನಿವೆ ಅಲ್ಲಿಗೆ ಫಾರಿನ್‌ನಿಂದ ಮತ್ತು ಭಾರತೀಯರು ಸಹ ಬಹಳಷ್ಟು ಜನರು ಬರುತ್ತಾರೆ. ಅಲ್ಲಿ ಅವರು ತಂಗಲಿಕ್ಕೆ ತಂಗುದಾಣಗಳನ್ನು ಕಲ್ಪಿಸಿಕೊಡಬೇಕೆಂಬ ದೃಷ್ಟಿಯಿಂದ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವುಗಳನ್ನು ಡವಲಪ್ ಮಾಡಬೇಕೆಂದರೆ ನಮ್ಮಲ್ಲಿ ಹಣವಿಲ್ಲ. ಅದಕ್ಕೋಸ್ಕರ ಅದಕ್ಕೆಂದೇ ಒಂದು ಸ್ಪೆಷಲ್ ಪ್ರಾಜೆಕ್ಟ್ ಮಾಡಿ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯಸರ್ಕಾರಗಳಿಂದ ಹಣವನ್ನು ಪಡೆದುಕೊಂಡು ಡೆವಲಪ್‌ಮೆಂಟ್ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀಮತಿ ಮೋಟಮ್ಮ : ಚಿಕ್ಕಮಗಳೂರು ಜಿಲ್ಲೆಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಿ ಎಂದರೆ ಕಾಫಿ ತೋಟಗಳು ಮತ್ತು ಹುಲ್ಲುಗಾವಲು ಬೆಳಸುವುದಕ್ಕೆ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟು ಐತಿಹಾಸಿಕ ಸ್ಥಳಗಳಿವೆ. ಹೊಯ್ಸಳರ ಮೂಲ ಸ್ಥಳವಾದ ಅಂಗಡಿ ದೇವಸ್ಥಾನದ ಬಗ್ಗೆ ನಾನು ಒಂದು ಪತ್ರವನ್ನು ಬರೆದಿದ್ದೇನೆ. ಅದಕ್ಕೆ ಲಿಖಿತ ಮೂಲಕ ನೀಡಿದ ಉತ್ತರದಲ್ಲಿ ದುಡ್ಡಿನ ಅವಶ್ಯಕತೆ ನೋಡಿ ಮಾಡುತ್ತೇವೆಂದು ಹೇಳಿದ್ದಾರೆ. ಅದೇ ರೀತಿ ಬಲ್ಲಾಳರಾಯನ ದುರ್ಗ ಇದೆ. ಕುದುರೆಮುಖವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಯೋಜನೆ ಪ್ರಾಮುಖ್ಯವಾದುದಾಗಿದೆ. ಹೀಗಿರುವಾಗ ಇವರು ಹುಲ್ಲುಗಾವಲನ್ನು ಮಾಡುತ್ತೇವೆಂದು ಹೇಳುವುದು ಸರಿಯಲ್ಲ. ನಮ್ಮಲ್ಲಿ ಹಿಸ್ಟಾರಿಕಲ್ ಪ್ಲೇಸಸ್ ಸಾಕಷ್ಟು ಇವೆ. ಹೊಯ್ಸಳರ ಮೂಲಸ್ಥಳವಾದ ಅಂಗಡಿ ದೇವಸ್ಥಾನ ಮೂಡಿಗೆರೆಯಲ್ಲಿದೆ. ಬಲ್ಲಾಳರಾಯನ ದುರ್ಗ ಇದೆ. ಇದನ್ನೆಲ್ಲಾ ಏತಕ್ಕೆ ಪ್ರವಾಸಿ ಕೇಂದ್ರಗಳನ್ನಾಗಿ ಮಾಡಬಾರದು.

ಶ್ರೀ ಕೆ. ಶಿವಮೂರ್ತಿ : ನಾನು ಮಾನ್ಯ ಸದಸ್ಯಣಿಯವರೊಡನೆ ಖುದ್ದಾಗಿ ಮಾತನಾಡಿದ್ದೇನೆ. ಅಸೆಂಬ್ಲಿ ಆದಮೇಲೆ ಆ ಜಾಗಕ್ಕೆ ಬರುತ್ತೇನೆ. ಅವು ಎಷ್ಟರಮಟ್ಟಿಗೆ ಪ್ರೇಕ್ಷಣೀಯ ಸ್ಥಳ ಎಂದು ನೋಡಿ ಪ್ರವಾಸಿ ಕೇಂದ್ರದ ಪಟ್ಟಿಗೆ ಸೇರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾನು ಎಷ್ಟು ಸಾರಿ ಎದ್ದೆ. ಏಕೆ ನನ್ನನ್ನು ನಿರ್ಧಯವಾಗಿ ನೋಡುತ್ತಿದ್ದೀರಿ.

ಅಧ್ಯಕ್ಷರು : ನೀವು ಗ್ರಾನೈಟ್ ವಾಟಾಳ್. ಆದುದರಿಂದ ನಿಮಗೆ ಪ್ರವಾಸಿ ಕೇಂದ್ರಬೇಡ.

ಅಧ್ಯಕ್ಷರು : ಶಿವನಂಜಪ್ಪನವರೆ, ನಿಮ್ಮ ಪ್ರಶ್ನೆ Q.No. 484(2765)ಕ್ಕೆ ಮಂತ್ರಿಗಳು ಎರಡು ವಾರ ಟೈಂ ಬೇಕು ಎಂದು ಕೇಳಿದ್ದಾರೆ.

SRI K.H. PATIL : I am very sorry that information has not been received. I have given a telegram, and the information will be received next week.

ಅಧ್ಯಕ್ಷರು : ಸಿಂಧ್ಯ ಅವರೆ ಪ್ರಶ್ನೆ 485 (2736) ಕ್ಕೆ ಒಂದು ವಾರ ಟೈಂ ಕೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸಭಾಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕು. ನಾನು ಹೋದ ವಾರ ಕೆ.ಎಸ್.ಆರ್.ಟಿ.ಸಿ.ಗೆ ಸಂಬಂಧಪಟ್ಟ ಹಾಗೆ ಒಂದು ಪ್ರಶ್ನೆ ಕೇಳಿದ್ದೆ.

ಆ ಪ್ರಶ್ನೆಗೆ ಹೌದು ಅಥವಾ ಇಲ್ಲ, ಅಥವಾ ಪರಿಶೀಲನೆಯಲ್ಲಿದೆ ಎಂದು ಹೇಳುವುದಕ್ಕೆ ಟೈಂ ತೆಗೆದುಕೊಂಡಿದ್ದಾರೆ. ಇವತ್ತು ಕೂಡ ಕೇಳಿರತಕ್ಕ ಪ್ರಶ್ನೆ ಸರಳವಾಗಿದೆ. ರಾಜ್ಯದಲ್ಲಿರುವ ಭಾರೀ, ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳ ಆಶ್ರಯದಲ್ಲಿ ಬರುವ ಕಾಲುವೆ,ತೂಬು ದುರಸ್ತಿ ಕೆಲಸಗಳು ಸ್ಥಗಿತವಾಗಿದ್ದು ರೈತರಿಗೆ ಸರಿಯಾಗಿ ನೀರು ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಬಂದಿದೆ ಅಥವಾ ಇಲ್ಲ ಎಂದು ಹೇಳುವುದಕ್ಕೆ ಏತಕ್ಕೆ ಟೈಂ ಬೇಕು?

ಶ್ರೀ ಕೆ.ಹೆಚ್. ಪಾಟೀಲ್ : ತಾವು ಹಾಕಿರತಕ್ಕದ್ದು ರಾಜ್ಯವ್ಯಾಪ್ತಿ ಪ್ರಶ್ನೆಯಾಗಿರುವುದರಿಂದ ಒಂದು ವಾರ ಟೈಂ ಕೇಳಿದ್ದೇವೆ.

ಅಧ್ಯಕ್ಷರು : ಒಂದು ವಾರ ಟೈಂ ಕೊಡಬಹುದು.